ಶ್ರೀ ಮರಿತಿಬ್ಬೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರು ನಿಯಮ-72ರಡಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಹೇಳಿಕೆ:

ವಿಷಯ: ಸರ್ಕಾರದ ಆದೇಶ ಸಂಖ್ಯೆ:ಮಮ ಇ 55 ಮಭಾಬ 2015, ದಿನಾಂಕ:15.11.2018ರ ಆದೇಶದಂತೆ ಅರ್ಹ ವ್ಯಕ್ತಿ, ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ನಿವೃತ್ತಿ ವೇತನ ಹಾಗೂ ಇನ್ನಿತರ ಸೌಲಭ್ಯ ಒದಗಿಸುವಂತೆ ಆದೇಶವಾಗಿ, 2 ವರ್ಷ ಸಮೀಪಿಸುತ್ತಿದ್ದರೂ ಸದರಿ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪದಿರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು.

*****

ಹೇಳಿಕೆ:

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ಸೆಕ್ಷನ್ 51 ರನ್ವಯ ಪ್ರಸ್ತುತ ಚಾಲ್ತಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸರ್ಕಾರದಿಂದ ನೋಂದಾಯಿಸಿದ ಹಾಗೂ ಮಗುವಿನ ರಕ್ಷಣೆ ಪೋಷಣೆಗೆ ಅವಶ್ಯಕವಾದ ಸೂಕ್ತ ಸೌಲಭ್ಯಗಳನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ನೀಡಲಾಗುತ್ತಿರುವ ಸ್ವಯಂ ಸೇವಾ ಸಂಸ್ಥೆಯೇ "ಅರ್ಹ ಸೌಲಭ್ಯ (ಅರ್ಹ ಸಂಸ್ಥೆ)".

ಈ ಕುರಿತು ಸರ್ಕಾರದ ಆದೇಶ ಸಂಖ್ಯೆ: ಮಮಇ 55 ಮಭಾಬ 2015, ಬೆಂಗಳೂರು ದಿ:15-11-2018ರಲ್ಲಿ ಈ ಕೆಳಕಂಡ 3 ಜಿಲ್ಲೆಗಳ 4 ಅರ್ಹ ವ್ಯಕ್ತಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ 8 ಸಿಬ್ಬಂದಿ ವರ್ಗದವರಿಗೆ ನಿವೃತ್ತಿ ವೇತನ ಹಾಗೂ ಇನ್ನಿತರ ಸೌಲಭ್ಯಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಲಾಗಿದೆ:

| ಕ್ರ.ಸಂ. | ಸಂಸ್ಥೆಯ ಹೆಸರು | ನೌಕರರ ಹೆಸರು | ಪದನಾಮ |
|---|---|---|---|
| 1. | ಆರ್ಫನೇಜ್ ಸಂಸ್ಥೆ, ಬಿಜಾಪುರ. | ಶ್ರೀ ಬಿ.ಎಲ್. ದೇಸಾಯಿ | ದ್ವಿ.ದ.ಸ |
| 2. | ಬಾಪೂಜಿ ಬಾಲನಿಕೇತನ, ಅಳಿಕೆ, ದಕ್ಷಿಣ ಕನ್ನಡ. | ಶ್ರೀ ಮಹೇಂದ್ರ ಹೆಗ್ಡೆ | ಪ್ರ.ದ.ಸ |
| 3. | ಬಾಪೂಜಿ ಬಾಲನಿಕೇತನ, ಅಳಿಕೆ ದಕ್ಷಿಣ ಕನ್ನಡ. | ಶ್ರೀ ಆನಂದ ಬೆಳಚಾಡ | ಅಡಿಗೆಯವರು |
| 4. | ನಿರ್ಮಲ ನಗರ ಮೋದಗೆ, ಬೆಳಗಾವಿ. | ಶ್ರೀ ಫ್ರಾನ್ಸಿಸ್ ಫರ್ನಾಂಡಿಸ್ | ದ್ವಿ.ದ.ಸ |
| 5. | ನಿರ್ಮಲ ನಗರ ಮೋದಗೆ, ಬೆಳಗಾವಿ. | ಶ್ರೀ ಆಲಫರ್ಡ್ ಕುಟಿನೊ | ಅಡಿಗೆಯವರು |
| 6. | ನಿರ್ಮಲ ನಗರ ಮೋದಗೆ, ಬೆಳಗಾವಿ. | ಶ್ರೀಮತಿ ಇಮಾಂಬಿ | ಜಮಾದಾರ ಅಡಿಕೆಯವರು |
| 7. | ಸೆಂಟ್ ಜೋಸೆಫ್ ಆರ್ಫನೇಜ್, ಸಂತಬಸ್ತವಾಡಿ, ಬೆಳಗಾವಿ. | ಶ್ರೀ ದೀಪಿಕಾ ಪಿಳ್ಳೆ | ದ್ವಿ.ದ.ಸ |
| 8. | ಸೆಂಟ್ ಜೋಸೆಫ್ ಆರ್ಫನೇಜ್, ಸಂತಬಸ್ತವಾಡಿ, ಬೆಳಗಾವಿ. | ಶ್ರೀ ಇಸ್ಮಾಬೆಲ್ ಸೌಜ | ಅಡಿಗೆಯವರು |

ಈ ಮೇಲ್ಕಂಡ ಸಿಬ್ಬಂದಿಗಳ ವಿರುದ್ಧ ಇಲಾಖೆ ವಿಚಾರಣೆ, ಲೋಕಾಯುಕ್ತ ಪ್ರಕರಣ, ಜಂಟಿ ಇಲಾಖಾ ವಿಚಾರಣೆ ಕ್ರಿಮಿನಲ್ ಮೊಕದ್ದಮೆ ಬಾಕಿ ಇದ್ದಲ್ಲಿ ಹಾಗೂ ಇವರುಗಳಿಂದ ಆರ್ಥಿಕ ನಷ್ಟ ಉಂಟಾದ್ದಲ್ಲಿ, ಬೇಬಾಕಿ

ಇದ್ದಲ್ಲಿ, ಅಧಿಕಾರಿಗಳ/ಸಿಬ್ಬಂದಿಗಳ ನಿವೃತ್ತಿ ಸೌಲಭ್ಯದಿಂದ ಕಟಾಯಿಸುವ ನಿಯಮಾನುಸಾರ ಕಾನೂನು ರೀತಿಯ ಕ್ರಮಕ್ಕೊಳಪಡಿಸುವ ಷರತ್ತಿಗೊಳಪಟ್ಟಿದೆ.

ಸದರಿ ಪಿಂಚಣಿ ಸೌಲಭ್ಯ ದಿನಾಂಕ:01.04.2006ಕ್ಕಿಂತ ಮೊದಲು ಸೇರಿದ, ಪ್ರಸ್ತುತ ಸೇವೆಯಲ್ಲಿರುವ ಅಥವಾ ಈಗಾಗಲೇ ನಿವೃತ್ತರಾದ ನಂತರ ಮೇಲೆ ತಿಳಿಸಲಾದ ಸಿಬ್ಬಂದಿಗಳಿಗೆ ಮಾತ್ರ ಅನ್ವಯವಾಗುತ್ತದೆ.

ನಿವೃತ್ತಿ ವೇತನವನ್ನು ಮಂಜೂರು ಮಾಡುವ ಅಧಿಕಾರವನ್ನು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು, ಇವರಿಗೆ ಪ್ರತ್ಯಾಯೋಜಿಸಲಾಗಿದೆ. ಸದರಿ ಪ್ರಾಧಿಕಾರಿಯು ಎಲ್ಲಾ ನಿವೃತ್ತಿವೇತನ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸಂಬಂಧಿಸಿದ ಸ್ವಯಂ ಸೇವಾ ಸಂಸ್ಥೆ ಹಾಗೂ ಅನುಮೋದಿತ ಸಿಬ್ಬಂದಿಯು, ಅನುದಾನ ಸಂಹಿತೆಯ ನಿಯಮಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಂಡು ನಿವೃತ್ತಿ ವೇತನವನ್ನು ಮಂಜೂರು ಮಾಡತಕ್ಕದ್ದು ಎಂದು ತಿಳಿಸಲಾಗಿರುತ್ತದೆ.

ಸದರಿ ಅರ್ಹ ವ್ಯಕ್ತಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ 8 ಸಿಬ್ಬಂದಿ ವರ್ಗದವರಿಗೆ ನಿವೃತ್ತಿ ವೇತನ, ಇನ್ನಿತರ ಸೌಲಭ್ಯಗಳನ್ನು ಮಂಜೂರು ಮಾಡುವ ನಿಟ್ಟಿನಲ್ಲಿ, 8 ಸಿಬ್ಬಂದಿಗಳ ಪೈಕಿ ಅರ್ಹ ಸಂಸ್ಥೆಯಿಂದ 3 ಸಿಬ್ಬಂದಿಗಳ ನಿವೃತ್ತಿ ಪ್ರಸ್ತಾವನೆಗಳು ಮಾತ್ರ ಸ್ವೀಕೃತಗೊಂಡಿರುತ್ತದೆ. ಉಳಿದ 5 ಸಿಬ್ಬಂದಿಗಳು ಪೂರಕ ಮಾಹಿತಿ ಸಲ್ಲಿಸಿರುವುದಿಲ್ಲ. ಸ್ವೀಕೃತಗೊಂಡ 3 ಪ್ರಸ್ತಾವನೆಗಳ ಮೇಲೆ ಕ್ರಮ ತೆಗೆದುಕೊಂಡು, ಒಬ್ಬರು ಸಿಬ್ಬಂದಿಯು ಈಗಾಗಲೇ ನಿವೃತ್ತಿ ವೇತನ ಸೌಲಭ್ಯ ಪಡೆಯುತ್ತಿದ್ದಾರೆ.

ಉಳಿದಂತೆ ಇಬ್ಬರು ಸಿಬ್ಬಂದಿಯವರ ಪಿಂಚಣಿ ಸೌಲಭ್ಯಕ್ಕಾಗಿ ದಿನಾಂಕ:07.05.2020ರಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಗಳೂರು, ದಕ್ಷಿಣ ಕನ್ನಡ, ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ದಿನಾಂಕ:18.09.2020ರಂದು ಮಹಾಲೇಖಪಾಲರಿಗೆ ಸಲ್ಲಿಸಲಾಗಿದ್ದು, ಮಹಾಲೇಖಪಾಲರಿಂದ ನಿವೃತ್ತ ಸೌಲಭ್ಯ ಮಂಜೂರಾತಿ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ.

**(ಸಂಖ್ಯೆ: ಮಮಇ 165 ಮಭಾಬ 2020)**

**(ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಸಚಿವರು.